ನಿಮ್ಮೊಡನೆ

# ಮನೆಯೊಳಗೆ ಮನೆಯೊಡತಿ ಇಲ್ಲ!

**ಕಾನೂನು ಗೊತ್ತಿರುವ, ಹೋರಾಟದ ಹಿನ್ನೆಲೆ ಇರುವ, ಸ್ವತಂತ್ರ ನಿರ್ಧಾರ ಕೈಗೊಳ್ಳುವ ದಿಟ್ಟೆಯೊಬ್ಬರು ಮಹಿಳಾ ಆಯೋಗದ ಅಧ್ಯಕ್ಷರಾಗಿರಬೇಕು. ಆ ಸ್ಥಾನ ಖಾಲಿ ಬಿಡಕೂಡದು.**

ಮಹಿಳಾ ಆಯೋಗಕ್ಕೆ ಕಳೆದ ಆರೂವರೆ ತಿಂಗಳಿಂದ ಅಧ್ಯಕ್ಷರಿಲ್ಲ! ಈ ಹಿಂದಿನ ಅಧ್ಯಕ್ಷೆ ಸಿ.ಮಂಜುಳಾ 2013ರ ಜನವರಿ 31ರಂದು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಆಗ ಬಿಜೆಪಿ ಸರ್ಕಾರ ಅಸ್ತಿತ್ವದಲ್ಲಿತ್ತು. ನಂತರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ನೂರು ದಿನ ಸಮೀಪಿಸಿತು. ಬಿಜೆಪಿಯಾಗಲಿ, ಕಾಂಗ್ರೆಸ್ ಆಗಲಿ ಹೊಸ ಅಧ್ಯಕ್ಷರನ್ನು ನೇಮಿಸುವ ಗೋಜಿಗೆ ಹೋಗಿಲ್ಲ. ಹಾಗಂತ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ನಿಂತಿಲ್ಲ. ಹಿಂದಿನ ಒಂದು ವರ್ಷ ಅವಧಿಯಲ್ಲಿ 785 ದೂರುಗಳು ಮಹಿಳಾ ಆಯೋಗದಲ್ಲಿ ದಾಖಲಾಗಿದ್ದರೆ, ಅಧ್ಯಕ್ಷರಿಲ್ಲದ ಈಚಿನ ಆರೂವರೆ ತಿಂಗಳ ಅವಧಿಯಲ್ಲಿ ದಾಖಲಾಗಿರುವ ದೂರುಗಳ ಸಂಖ್ಯೆ 770 ದಾಟಿದೆ. ಅಂದರೆ ಮಹಿಳೆಯರ ಮೇಲೆ ನಿರಂತರವಾಗಿ ನಡೆಯುತ್ತಿರುವ ದೌರ್ಜನ್ಯ ಇತ್ತೀಚಿನ ದಿನಗಳಲ್ಲಿ ದುಪ್ಪಟ್ಟಾಗಿದೆ.

ಮಹಿಳಾ ಆಯೋಗಕ್ಕೆ ದೂರು ದಾಖಲಿಸಿ ನ್ಯಾಯ ಪಡೆಯುವ ಜಾಗೃತಿ ಮಹಿಳೆಯರಲ್ಲಿ ಹೆಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಆಯೋಗವನ್ನು ಮತ್ತಷ್ಟು ಬಲಪಡಿಸುವ ಬದಲಾಗಿ ನಿಷ್ಕ್ರಿಯಗೊಳಿಸಲಾಗಿದೆ! ನೊಂದ ಮಹಿಳೆಯರಿಗೆ ತ್ವರಿತವಾಗಿ ನ್ಯಾಯ ನೀಡುವ ಉದ್ದೇಶದಿಂದ ಆಯೋಗ ಸ್ಥಾಪಿಸಲಾಗಿದೆ. ಮಹಿಳೆಯರ ದುಃಖ ದುಮ್ಮಾನ ಆಲಿಸಲು ಕೌಟುಂಬಿಕ ನ್ಯಾಯಾಲಯಗಳೇನೋ ಇವೆ. ಅಲ್ಲಿ ನ್ಯಾಯ ಪಡೆಯಬೇಕಾದರೆ ವಕೀಲರನ್ನು ನೇಮಿಸಿಕೊಳ್ಳಬೇಕು, ಬಹುತೇಕ ನ್ಯಾಯಾಧೀಶರು ಪುರುಷರೇ ಆಗಿರುವುದರಿಂದ ಸೂಕ್ಷ್ಮ ಸಂಗತಿಗಳನ್ನು ಹೇಳಿಕೊಳ್ಳಲು ಕೆಲವು ಮಹಿಳೆಯರಿಗೆ ಹಿಂಜರಿಕೆ, ನ್ಯಾಯಾಲಯ ಎಂದರೇ ವಿಳಂಬ! ವಿಪರೀತ ಖರ್ಚು ಬೇರೆ. ಈ ಎಲ್ಲಾ ಕಾರಣಕ್ಕೆ ಮಹಿಳೆಯರ ನೆರವಿಗೆ ಮಹಿಳಾ ಆಯೋಗಗಳು ಜನ್ಮತಾಳಿದವು.

ಆಯೋಗಕ್ಕೆ ಪಕ್ಷಾತೀತವಾಗಿ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು ಎನ್ನುವುದು ಒಂದು ಆದರ್ಶ. ಆದರೆ ಇದುವರೆಗೆ ಆಡಳಿತ ನಡೆಸಿದ ಎಲ್ಲ ಸರ್ಕಾರಗಳೂ ತಮ್ಮ ಪಕ್ಷದ ಕಾರ್ಯಕರ್ತರುಗಳನ್ನೇ ಅಧ್ಯಕ್ಷರಾಗಿ ನೇಮಕ ಮಾಡುತ್ತ ಬಂದಿವೆ. ಅಂತೆಯೇ ಪಕ್ಷಪಾತ ಮತ್ತು ನಿಷ್ಪಕ್ಷಪಾತ ಎರಡೂ ರೀತಿಯ ನಿರ್ಣಯಗಳು ಹೊರಹೊಮ್ಮಿದ ಇತಿಹಾಸ ಆಯೋಗಕ್ಕಿದೆ. ಸ್ಟೇ ಹೋಂನಲ್ಲಿ ನಡೆದ ಅಹಿತಕಾರಿ ಘಟನೆಗಳ ಕುರಿತು ಪಕ್ಷಪಾತದ ವರದಿ ನೀಡಿದರು ಎಂಬ ಆರೋಪ ಎದುರಿಸಿದ ಅಧ್ಯಕ್ಷರಿದ್ದ ಹಾಗೆಯೇ; ತಮ್ಮದೇ ಪಕ್ಷದ ಶಾಸಕರು, ಮಂತ್ರಿಗಳು, ಅಧಿಕಾರಿಗಳು– ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದಾಗ ನೋಟಿಸ್ ಜಾರಿ ಮಾಡಿದ ದಿಟ್ಟತನದ ಅಧ್ಯಕ್ಷರಿದ್ದ ಉದಾಹರಣೆಗಳೂ ಇವೆ. ಆಳುವ ಪಕ್ಷಕ್ಕೆ ಮುಜುಗರ ತರುವ ಸನ್ನಿವೇಶಗಳು ಕೆಲವೊಂದು ಬಾರಿ ಸೃಷ್ಟಿಯಾಗಬಹುದು. ಉಳಿದಂತೆ ಆಯೋಗ ಮಾಡುವ ಕೆಲಸ ಅಪಾರವಾಗಿದೆ. ಆಯೋಗದಿಂದ ನ್ಯಾಯ ನಿರೀಕ್ಷಿಸುವ ಅಸಂಖ್ಯಾತ ಮಹಿಳೆಯರಿದ್ದಾರೆ. ಆಳುವ ಪಕ್ಷದವರೋ ಅಥವಾ ಪಕ್ಷಾತೀತರೋ ಒಟ್ಟಿನಲ್ಲಿ ಆಯೋಗಕ್ಕೆ ಸದಾ ಒಬ್ಬ ಅಧ್ಯಕ್ಷರಿರುವುದು ಮುಖ್ಯ. ಯಾವುದೇ ಪಕ್ಷಕ್ಕೆ ಸೇರದವರು ಅಧ್ಯಕ್ಷರಾದರೆ ಮತ್ತೂ ಒಳ್ಳೆಯದೇ. ಆದರೆ ಅಧ್ಯಕ್ಷರೇ ಇಲ್ಲ ಎಂದರೆ 'ಮನೆಯೊಳಗೆ ಮನೆಯೊಡೆಯನೇ ಇಲ್ಲ' ಎನ್ನುವ ಸ್ಥಿತಿ. ಈ ಅಧ್ಯಕ್ಷರಿಗೆ ಕಾನೂನು ಗೊತ್ತಿರಬೇಕು, ಹೋರಾಟದ ಹಿನ್ನೆಲೆ ಇರಬೇಕು, ಸ್ವತಂತ್ರ ನಿರ್ಧಾರ ಕೈಗೊಳ್ಳುವ ದಿಟ್ಟತನ ಇರಬೇಕು.

ಅಧ್ಯಕ್ಷರ ಗೈರುಹಾಜರಿಯಲ್ಲಿ ಆಯೋಗದ ಅಧಿಕಾರಿಗಳೇ ಪ್ರಕರಣಗಳ ಇತ್ಯರ್ಥ ಮತ್ತು ಕೌನ್ಸೆಲಿಂಗ್‌ಅನ್ನು ಕೈಗೊಳ್ಳಬಹುದು ಎಂಬುದೇನೋ ನಿಜ. ಆದರೆ ಅದಕ್ಕೆ ತನ್ನದೇ ಆದ ಮಿತಿಗಳಿವೆ. ಅಧ್ಯಕ್ಷರಹಿತ ಅವಧಿಯಲ್ಲಿ ಶೇ.10ರಷ್ಟು ಪ್ರಕರಣಗಳು ಮಾತ್ರ ಇತ್ಯರ್ಥವಾಗಿದ್ದು, 720 ದೂರುಗಳು ನನೆಗುದಿಗೆ ಬಿದ್ದಿವೆ. ಆದ್ದರಿಂದ ದಿಟ್ಟ, ತ್ವರಿತ ನಿರ್ಧಾರದ ಅಧ್ಯಕ್ಷರ ಉಪಸ್ಥಿತಿ ಆಯೋಗಕ್ಕೆ ಬಹಳ ಮುಖ್ಯ. ಮಹಿಳಾ ಆಯೋಗಗಳನ್ನು ರಚಿಸಿದ್ದರ ಹಿಂದಿನ ಉದ್ದೇಶವೇ ಅದು. ಕೆಲವು ವಿವಾದಗಳಿದ್ದರೂ ಕೇರಳ, ಮಹಾರಾಷ್ಟ್ರ, ಪಶ್ಚಿಮ ಬಂಗಾಳದ ಮಹಿಳಾ ಆಯೋಗಗಳು ಹಲವು ಸಂದರ್ಭಗಳಲ್ಲಿ ತ್ವರಿತ ನ್ಯಾಯದಾನಕ್ಕೆ ಹೆಸರು ಮಾಡಿವೆ. ಮಹಿಳಾ ಸಮಾನತೆಯನ್ನು 800 ವರ್ಷಗಳ ಹಿಂದಿನಿಂದಲೇ ಪ್ರತಿಪಾದಿಸುತ್ತ ಬಂದ ರಾಜ್ಯ ಕರ್ನಾಟಕ. ಆ ರಾಜ್ಯಗಳಿಗಿಂತ ಹಿಂದುಳಿಯಲು ಯಾವುದೇ ಕಾರಣಗಳಿಲ್ಲ.

ಅಷ್ಟಕ್ಕೂ ಮಹಿಳಾ ಆಯೋಗ ಒಂದು ಶಾಸನಬದ್ಧ ಮಂಡಳಿ. ಇಷ್ಟು ದೀರ್ಘ ಕಾಲ ಅದನ್ನು ಖಾಲಿ ಬಿಡುವಂತಿಲ್ಲ. ಈ ವಿಷಯದಲ್ಲಿ ಯಾರಾದರೂ ನ್ಯಾಯಾಲಯಕ್ಕೆ ರಿಟ್ ಸಲ್ಲಿಸಿದರೆ ಸರ್ಕಾರ ಛೀಮಾರಿ ಹಾಕಿಸಿಕೊಳ್ಳುವ ಸಾಧ್ಯತೆ ಇದೆ. ನೊಂದ ಮಹಿಳೆಗೆ ಈಗ ಉಳಿದಿರುವ ದಾರಿ ಅದೊಂದೇ ಎನ್ನೋಣವೆ?

■ ಗುಡಿಹಳ್ಳಿ ನಾಗರಾಜ



ಗಣೇಶ್